# ಗಿರೀಶ್ ಕಾರ್ನಾಡರ ನಾಗಮಂಡಲ ನಾಟಕ: ಸಂಕೇತಗಳ ಪರಾಮರ್ಶೆ

**ತಾರಾಮಣಿ ಆರ್.**

ಸಹ ಪ್ರಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೆ. ಆರ್. ಪುರ, ಬೆಂಗಳೂರು.

**Received: 01-04-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525902**

## ABSTRACT:

ಪ್ರಮುಖ ಚಿಂತಕರಲ್ಲಿ ಒಬ್ಬರಾದ ಎ ಕೆ ರಾಮಾನುಜನ್ ಅವರು ಹೇಳಿದ ಜನಪದ ಕಥೆಯನ್ನು ಆಧರಿಸಿ ನಾಟಕ ಕ್ಷೇತ್ರದ ಧೀಮಂತ ಪ್ರತಿಭೆಗಳಾದ ಗಿರೀಶ್ ಕಾರ್ನಾಡರು ನಾಗಮಂಡಲ ನಾಟಕವನ್ನೂ, ಕಂಬಾರರು ಸಿರಿಸಂಪಿಗೆ ನಾಟಕವನ್ನೂ ರಚಿಸಿದ್ದಾರೆ. ಎರಡು ನಾಟಕಗಳ ವಸ್ತು ಒಂದೇ ಆದರೂ ನಿರೂಪಣಾ ಶೈಲಿ, ನಾಟಕದ ತಂತ್ರಗಾರಿಕೆ ಹಾಗೂ ಧೋರಣೆಗಳು ಭಿನ್ನವಾಗಿವೆ. ನಾಟಕಗಳು ಮೇಲ್ನೋಟಕ್ಕೆ ಸರಳವಾದ ವಸ್ತುವನ್ನು ಒಳಗೊಂಡಂತೆ ಕಂಡರೂ ಓದುಗರಿಗೆ ಒಂದು ಸುಂದರವಾದ, ಅದ್ಭುತವಾದ ಸತ್ಯದ ಅನಾವರಣ ಮಾಡಿಸುತ್ತದೆ. ನಾಗಮಂಡಲ ನಾಟಕವು ಸಾಂಸ್ಕೃತಿಕ, ಧಾರ್ಮಿಕ, ಮಾನಸಿಕ ಮತ್ತು ಸಾಮಾಜಿಕ ಜೀವನವನ್ನು ಸಂಕೇತಗಳ ಬಳಕೆಯ ಮೂಲಕ ಪ್ರತಿಬಿಂಬಿಸುತ್ತದೆ. ನಾಟಕವು ಪಿತೃಪ್ರಧಾನ ವ್ಯವಸ್ಥೆಯಲ್ಲಿನ ಪುರುಷನ ನ್ಯೂನ್ಯತೆಗಳನ್ನು, ವರ್ತನೆಯ ರೀತಿಯನ್ನು ಹಾಗೂ ಪುರಾತನ ಸಾಂಪ್ರದಾಯಿಕ ಮೌಲ್ಯಗಳು ಮತ್ತು ನಂಬಿಕೆಗಳ ಬಗೆಗೆ ದೋಷಾರೋಪಣೆ ಮಾಡುತ್ತದೆ. ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಪರಿಕಲ್ಪನೆಗಳಾದ ಮಹಿಳೆಯರ ಸ್ಥಾನಮಾನ, ಗಂಡು-ಹೆಣ್ಣಿನ ಸಂಬಂಧ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳು ಮಹಿಳೆಯರ ಮೇಲೆ ಉಂಟುಮಾಡಬಹುದಾದ ಪರಿಣಾಮ ಮತ್ತು ಪ್ರಭಾವ ಮುಂತಾದ ವಿಚಾರಗಳನ್ನು ನಾಟಕವು ಚರ್ಚಿಸುತ್ತದೆ.

ನಾಟಕದಲ್ಲಿ ಬಳಸುವ ಸಾಂಸ್ಕೃತಿಕ ಸಂಕೇತಗಳು, ಮೌಲ್ಯಗಳು, ವರ್ತನೆಗಳು, ನಂಬಿಕೆಗಳು, ಕಲ್ಪನೆಗಳು, ಮೂಢನಂಬಿಕೆಗಳು ಭಾರತೀಯ ಸಂಸ್ಕೃತಿ ಮತ್ತು ಸಮುದಾಯವನ್ನು ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ನಾಟಕದಲ್ಲಿ ಬಳಕೆಯಾಗಿರುವ ಸಂಕೇತಗಳು ನಾಟಕದಲ್ಲಿನ ಮುಖ್ಯ ಪಾತ್ರಗಳ ಬೆಳವಣಿಗೆಗೆ ಸಹಾಯಕವಾಗುವಂತೆ ಮೂಡಿರುವುದು ಕಂಡುಬರುತ್ತದೆ.

**KEYWORDS:**
ಜ್ಯೋತಿಗಳು, ಗಿಡಮೂಲಿಕೆ/ಬೇರು, ಹಾವು/ನಾಗಪ್ಪ, ಕಥೆ ಮತ್ತು ಹಾಡು, ಕನಸು, ಹಗಲು ಮತ್ತು ರಾತ್ರಿ.

ನಾಟಕವು ಮೂರು ಭಾಗಗಳಲ್ಲಿ ಜರುಗುತ್ತವೆ. ಇದರ ಪ್ರಸ್ತಾವನಾ ಭಾಗ ಪ್ರಾರಂಭವಾಗುವುದು ಹಾಳುಬಿದ್ದ ಗುಡಿಯಲ್ಲಿ. ಮಾನವನು ಪವಿತ್ರವೆಂದು ನಂಬಿರುವ ಧಾರ್ಮಿಕ ಸ್ಥಳವಾದ ದೇವಾಲಯದಲ್ಲಿ. ಹಾಳುಬಿದ್ದ ಗುಡಿಯಲ್ಲಿ ಭಗ್ನಗೊಂಡ ದೇವರ ವಿಗ್ರಹವಿದ್ದು ಅದು ಯಾವ ದೇವತೆಯೆಂಬ ಗುರುತು ಸಿಗದಂತಿದೆ. ನಾಟಕದ ಕ್ರಿಯೆ ಜರುಗುವುದು ರಾತ್ರಿಯ ಸಮಯದಲ್ಲಿ. ಬಿರುಕು ಬಿದ್ದಿರುವ ಮೇಲ್ಛಾವಣಿ ಮತ್ತು ಗೋಡೆಯಿಂದ ಚಂದ್ರನ ಕಾಂತಿ ಹಾಗೂ ಕಿರಣಗಳು ಎಲ್ಲೆಡೆ ಹರಡಿವೆ. ಕಾರ್ನಾಡರ ಬಲಿ, ಹಯವದನ ನಾಟಕಗಳಲ್ಲಿಯೂ ಪಾಳುಬಿದ್ದ ಗುಡಿಯ ಚಿತ್ರಣವಿದ್ದು ನಾಟಕಕ್ಕೆ ಹೊಸ ತಿರುವುಗಳು ದೊರೆಯುವುದು ಈ ಪಾಳುದೇವಾಲಯಗಳಲ್ಲಿಯೇ ಎಂಬುದನ್ನು ಗಮನಿಸಬಹುದು. ಬಲಿ ನಾಟಕದಲ್ಲಿ ಅನೈತಿಕ ಸಂಬಂಧಕ್ಕಾಗಿ ಪಾಳುಬಿದ್ದ ದೇವಾಲಯವು ಬಳಕೆಗೊಂಡಿದ್ದರೆ, ಹಯವದನ ನಾಟಕದಲ್ಲಿ ಪವಿತ್ರವಾದ ದೇವಾಲಯದ ನಾಲ್ಕುಗೋಡೆಗಳ ಮಧ್ಯೆ ರಕ್ತಪಾತವಾಗುವ ಸನ್ನಿವೇಶವನ್ನು ಕಾಣುತ್ತೇವೆ. ಹೀಗೆ ಕಾರ್ನಾಡರ ನಾಟಕಗಳಲ್ಲಿ ದೇವಾಲಯಗಳು ಭಿನ್ನ ಭಿನ್ನ ಸನ್ನಿವೇಶಗಳಿಗೆ ಅನುಗುಣವಾಗಿ ಬಳಕೆಗೊಂಡಿದೆ. ನಾಗಮಂಡಲ ನಾಟಕದಲ್ಲಿ ಪಾಳುಬಿದ್ದ ಗುಡಿಯು ಜ್ಯೋತಿಗಳ ಹರಟೆಯ ತಾಣವಾಗಿದೆ.

## ನಾಗಮಂಡಲ ನಾಟಕದಲ್ಲಿ ಬಳಕೆಯಾಗಿರುವ ಸಂಕೇತಗಳು:

### ಜ್ಯೋತಿಗಳು:

ಈ ನಾಟಕದಲ್ಲಿನ ಜ್ಯೋತಿಗಳು ಮೇಳದವರ ಪಾತ್ರವನ್ನು ವಹಿಸಿರುವಂತೆ ಕಂಡುಬರುತ್ತವೆ. ಊರಿನ ಮನೆಗಳಲ್ಲಿ ದೀಪ ನಂದಿದ ನಂತರ ಪಾಳುಬಿದ್ದ ಗುಡಿಯಲ್ಲಿ ಬಂದು ಸೇರಿ ತಮ್ಮ ತಮ್ಮ ಮನೆಗಳಲ್ಲಿನ ಆಯಾ ದಿನದ ರಹಸ್ಯಗಳು, ಆಗುಹೋಗುಗಳನ್ನೂ ಅವು ಹಂಚಿಕೊಳ್ಳುತ್ತವೆ. ಸ್ವತಃ ಕಾರ್ನಾಡರೇ ಹೇಳುವಂತೆ "ನಾಗಮಂಡಲ ಎ. ಕೆ. ರಾಮಾನುಜನ್ ಹೇಳಿದ ಎರಡು ಕಥೆಗಳನ್ನು ಆಧರಿಸಿದೆ. ಈ ಕಥೆಗಳನ್ನು ಸಾಮಾನ್ಯವಾಗಿ ಮನೆಯಲ್ಲಿ ವಯಸ್ಸಾದ ಮಹಿಳೆಯರು ಸಂಜೆ ಮಕ್ಕಳಿಗೆ ಊಟ

ಮಾಡಿಸುವಾಗ, ಅಡುಗೆ ಮನೆಯಲ್ಲಿ ಅಥವಾ ಮಲಗಿಸುವಾಗ ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಬೇರೆ ಶ್ರೋತೃಗಳೂ ಹಿರಿಯ ಮಹಿಳೆಯರೇ ಆಗಿರುತ್ತಿದ್ದರು. ಆದ್ದರಿಂದ ಈ ಕಥೆಗಳು ಮಕ್ಕಳಿಗಾಗಿ ಇದ್ದರೂ, ಕುಟುಂಬದ ಮಹಿಳೆಯರಲ್ಲಿ ಪರಸ್ಪರ ಸಂಪರ್ಕ (ಸಂವಹನ) ಸಾಧನಗಳಾಗಿಯೂ ಕೆಲಸ ಮಾಡುತ್ತಿದ್ದವು. ಮಹಿಳೆ ತನ್ನ ಸುತ್ತಲಿನ ವಾಸ್ತವದಲ್ಲಿ ಕಂಡುಕೊಂಡಿದ್ದನ್ನೂ ಅವು ಅಭಿವ್ಯಕ್ತಿಸುತ್ತಿದ್ದವು... ಉದಾಹರಣೆಗೆ, ನಾಗಮಂಡಲದಲ್ಲಿ ರಾಣಿಯ ಸ್ಥಿತಿ ಅವಿಭಕ್ತ ಕುಟುಂದಲ್ಲಿ ಯುವತಿಯೊಬ್ಬಳಿಗೆ ಅವಳ ಗಂಡ ಪರಸ್ಪರ ಸಂಬಂಧವಿಲ್ಲದ ಎರಡು ಪಾತ್ರಗಳಂತೆ ಕಾಣುವ ರೀತಿ ಹಗಲಿನಲ್ಲಿ ಅಪರಿಚಿತನಂತೆ ಹಾಗೂ ರಾತ್ರಿಯಲ್ಲಿ ಪ್ರೇಮಿಯಂತೆ.... ರಾಣಿ ಬಂದಿಯಾಗಿರುವ ಬೀಗ ಹಾಕಿದ ಮನೆ ಅವಳು ಮದುವೆಯಾಗಿ ಬಂದು ಸೇರಿದ ಕುಟುಂಬವೂ ಆಗಿರಬಹುದು.... . ಇವುಗಳಲ್ಲಿ ಬಹಳಷ್ಟು ಕಥೆಗಳು ಈ ಕಥೆಗಳ ರೂಪುರೇಷೆಯನ್ನು ಕುರಿತೂ ಹೇಳುತ್ತವೆ. ಇಲ್ಲಿನ ದೀಪದ ಕಥೆ ಈ ಮೌಖಿಕ ಕಥೆಗಳಲ್ಲಿನ ವೈಪರಿತ್ಯದ ಮೇಲೆ ಟಿಪ್ಪಣಿ ಮಾಡುತ್ತದೆ. ಅವಕ್ಕೆ ತಮ್ಮದೇ ಆದ ಅಸ್ತಿತ್ವವಿದೆ. ಆದರೂ ಕಥೆ ಹೇಳುವವನಿಂದ ಸ್ವತಂತ್ರವಾಗಿ ಕೇಳುಗನ ಮೂಲಕ ಬದುಕಿ ಉಳಿಯುತ್ತವೆ. ಹೀಗೆ ನೋಡಿದಾಗ, ಒಂದು ಕಥೆಯ ಸ್ಥಾನ ಒಬ್ಬ ಮಗಳ ಸ್ಥಾನಕ್ಕೆ ಸಮನಾಗುತ್ತದೆ. ಏಕೆಂದರೆ ಸಂಪ್ರದಾಯದಂತೆ ಮಗಳನ್ನು ಕೂಡ ಮನೆಯಲ್ಲಿ ಹೆಚ್ಚು ಕಾಲ ಉಳಿಸಿಕೊಳ್ಳದೆ ಹಸ್ತಾಂತರಿಸ ಬೇಕಾಗುತ್ತದೆ." ಈ ಮೇಲಿನ ಮಾತುಗಳು ನಾಟಕದ ನಾಯಕಿಯನ್ನು ಕುರಿತು ಹೇಳಿರುವುದಾದರೂ ನಾಟಕದಲ್ಲಿ ಬರುವ ಕಥೆ ಮತ್ತು ಜ್ಯೋತಿಗಳನ್ನೂ ಸಂಕೇತಿಸುತ್ತದೆ. ಹೀಗೆ ರಾತ್ರಿಯಲ್ಲಿ ಜ್ಯೋತಿಗಳು ಒಂದೆಡೆ ಸೇರುವುದು ಜನಪದರ ಕಲ್ಪನೆ. ಅವುಗಳಿಗೆ ಮಾತು ಬರುವಂತೆ ಮಾಡಿ ಪ್ರೇಕ್ಷಕರನ್ನೂ ಕೂರಿಸಿಕೊಳ್ಳುವುದು ಕಾರ್ನಾಡರ ಉತ್ತಮ ತಂತ್ರವಾಗಿದೆ. ಸೂರ್ಯ ಮುಳುಗಿದ ಕೂಡಲೇ ಹತ್ತಿಕೊಳ್ಳುವ ಜ್ಯೋತಿಗಳು ಎಲ್ಲರೂ ಮಲಗಿದ ನಂತರ ಗುಡಿಗೆ ಬರುತ್ತವೆ. "ಹಣತೆಯಿಲ್ಲ, ದೀಪ ಹಿಡಿದವರಿಲ್ಲ, ಬರೀ ಜ್ಯೋತಿ, ಏನೂ ಆಧಾರವಿಲ್ಲದೆ ಗಾಳಿಯಲ್ಲಿ ತೇಲಿ ಬರುವ ಜ್ಯೋತ್ಯಮ್ಮಗಳು ಪರಸ್ಪರ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ. ಕೇವಲ ಮಾತಿನ ಬಗೆಯಷ್ಟೇ ಆಗಿ ಆ ಸಂದರ್ಭ ಕಾಣಿಸುವುದಿಲ್ಲ. ಅದೊಂದು ಜಾನಪದ ಮನೋಧರ್ಮದ ವಿಶಿಷ್ಟ ಸನ್ನಿವೇಶ, ವಿವಿಧ ಸಂಸ್ಕೃತಿಗಳ ಅನಾವರಣ ಆ ಮಾತಿನ ಬಗೆಯಲ್ಲಿದೆ."

ನಾಟಕದಲ್ಲಿ ಜ್ಯೋತಿಗಳು ತಾವು ಉರಿಯಲು ಬಳಸುವ ಭಿನ್ನ ಭಿನ್ನ ಎಣ್ಣೆಯ ಕುರಿತು ಚರ್ಚೆಯನ್ನು ಮಾಡುತ್ತವೆ. ಇಲ್ಲಿ ಕಾರ್ನಾಡರು ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಶತಮಾನಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲರಾದವರ ಸ್ಥಿತಿಗತಿಯನ್ನು ಜ್ಯೋತಿಗಳ ಚರ್ಚೆಯ ರೂಪದಲ್ಲಿ ಬಯಲುಗೊಳಿಸಿದ್ದಾರೆ.

ಜ್ಯೋತಿಗಳು ಪಾಳುಬಿದ್ದ ಗುಡಿಯಲ್ಲಿ ಸೇರಿ ಮಾಡುವ ಹರಟೆಯು ಮುಖ್ಯವಾಗಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಮಾಡುವ ಹರಟೆಯನ್ನು ನೆನಪಿಗೆ ತರುವುದಲ್ಲದೆ, ಜ್ಯೋತ್ಯಮ್ಮಗಳ ಈ ಸಂಭಾಷಣೆಯು ನಮ್ಮ ಸಮಾಜದ ಹಲವು ಕುಟುಂಬಗಳ ವಿಚಾರಗಳನ್ನು ಬೆಳಕಿಗೆ ತರುತ್ತವೆ. ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಪಾಳುಬಿದ್ದ ಗುಡಿಯಲ್ಲಿ ಸೇರಿರುವ ಜ್ಯೋತಿಗಳು ತಮ್ಮ ತಮ್ಮ ಮನೆಯ ಒಡೆಯ ಮತ್ತು ಒಡತಿಯ ಬಗೆಗೆ ಮಾತಾಡುತ್ತವೆ. ಅವರ ಲೈಂಗಿಕ ಜೀವನವನ್ನು ಕುರಿತು ಮಾತನಾಡುತ್ತವೆ. ತಾವು ಬೆಳಕು ನೀಡುವ ಮನೆಯ ಪರಿಸ್ಥಿತಿಗಳನ್ನು ಕುರಿತು ಚರ್ಚಿಸುತ್ತವೆ. ಗಂಡ ಹೆಂಡತಿಯ ಸಂಬಂಧಗಳನ್ನು ಕುರಿತು ಮಾತನಾಡುವ ಜ್ಯೋತಿಯ ವಿಚಾರಗಳು ನಮ್ಮ ದೇಶದಲ್ಲಿರುವ ಅವಿಭಕ್ತ ಕುಟುಂಬದಲ್ಲಿನ ದಂಪತಿಗಳು ಎದುರಿಸುವ ಸಮಸ್ಯೆಗಳನ್ನು ಚಿತ್ರಿಸುತ್ತದೆ. ನಾಟಕಕಾರರಾದ ಕಾರ್ನಾಡರು ಭಾರತದ ಜನರ ಜೀವನದ ಸ್ಥಿತಿಗತಿಗಳನ್ನು ತೋರಿಸುತ್ತಲೇ, ಇಂದಿಗೂ ಜನರಿಗೆ ಹೊಸ ಕಥೆಗಳನ್ನು ಹೇಳುವ, ಕೇಳುವ, ಅದರ ಬಗೆಗೆ ಗೇಲಿ ಮಾಡುವ, ಆನಂದಿಸುವ, ವಿನೋದ ಮಾಡುವ ಉತ್ಸಾಹವಿರುವುದನ್ನು ಜ್ಯೋತಿಗಳ ಮಾತುಗಳ ಮೂಲಕ ಚಿತ್ರಿಸುತ್ತಾರೆ.

**ಕಥೆ ಮತ್ತು ಹಾಡು:**

ನಾಟಕದಲ್ಲಿ ಕಥೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಹೊರಬರಲು ಮನುಷ್ಯನನ್ನು ಮಾಧ್ಯಮವಾಗಿ ಬಳಸಿಕೊಳ್ಳುವುದು ಒಂದು ಮಾರ್ಗವಾದರೆ, ಎರಡನೆಯದಾಗಿ ಮನುಷ್ಯ ತಾನು ಜೀವಂತವಾಗಿರಲು ಕಥೆ ಹೆಚ್ಚು ಅಗತ್ಯ ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ. ಕಥೆ ಮತ್ತು ಹಾಡು ಜನಪದೀಯರಲ್ಲಿ ಹೆಚ್ಚು ಪ್ರಸಿದ್ಧವಾದವು. ಕಥೆಗಗಳನ್ನು ಹೇಳುವ ಮತ್ತು ಕೇಳುವ ಪ್ರಕ್ರಿಯೆ ಬಹಳ ಹಿಂದಿನಿಂದಲೂ ಜರುಗಿಕೊಂಡು ಬಂದಿದೆ. ಈ ಕಥೆಗಳು ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದವು, ಮೂಲತಃ ತಮ್ಮ ಧಣಿವನ್ನು ನಿವಾರಿಸಿಕೊಳ್ಳಲು ಮಾನವ ತನ್ನ ಮನರಂಜನೆಗೆಂದು

ರೂಪಿಸಿಕೊಂಡ ಈ ಕಥೆ ಹೇಳುವ ಕ್ರಮವು ಮುಂದೆ ಕಲೆಯಾಗಿ ರೂಪ ಪಡೆಯಿತು. ಹಿರಿಯರು-ಕಿರಿಯರು, ಹೆಂಗಸರು-ಗಂಡಸರು, ರಾಜ-ರಾಣಿಯರು ಮಕ್ಕಳು ಎಂಬ ವ್ಯತ್ಯಾಸವಿಲ್ಲದೆ ಎಲ್ಲರಲ್ಲೂ ಆಸಕ್ತಿಯನ್ನು ಕೆರಳಿಸುವ ಗುಣ ಕಥೆಯಲ್ಲಿದೆ ಹಾಗಾಗಿ ಕಥೆ ಹೇಳುವ ಮತ್ತು ಕೇಳುವ ಕ್ರಿಯೆ ಮಾನವ ಇರುವ ಕಡೆಯಲ್ಲೆಲ್ಲಾ ನಿರಂತರವಾಗಿ ಕಂಡುಬರುತ್ತದೆ. ಕಥೆಗಳು ಕಾಲದಿಂದ ಕಾಲಕ್ಕೆ , ಬಾಯಿಂದ ಬಾಯಿಗೆ, ದೇಶದಿಂದ ದೇಶಕ್ಕೆ ಹರಿದು ಬರುವಾಗ ಬದಲಾವಣೆಗೆ ಒಳಪಡುತ್ತವೆ. ಇಂತಹ ಬದಲಾವಣೆಗಳು ಬಹುಶಃ ಕಥೆಯ ಕಾಲ ಮತ್ತು ಸ್ಥಳಗಳನ್ನು ಅವಲಂಬಿಸಿರುತ್ತವೆ. ಒಟ್ಟಾರೆಯಾಗಿ ದಿನಗಳೆದಂತೆ, ವರ್ಷಗಳು ಉರುಳಿದಂತೆ ಕಥೆಗಳು ಚಾರಿತ್ರಿಕ ವ್ಯತ್ಯಾಸಕ್ಕೆ ಗುರಿಯಾಗುತ್ತವೆ. ಜಾನಪದ ನಾಟಕಗಳಲ್ಲಿ ಭಾಗವತ ಅಥವಾ ಸೂತ್ರಧಾರನ ಮೂಲಕ ನಾಟಕ ಚಾಲನೆ ಹೊಂದುತ್ತದೆ. ಆದರೆ ಕಾರ್ನಾಡರ ನಾಗಮಂಡಲ ನಾಟಕವು ಪರಂಪರಾಗತವಾದ ಈ ಚಾಲನೆಗೆ ಹೊಸರೂಪವನ್ನು ಕೊಡುವಲ್ಲಿ ಯಶಸ್ವಿಯಾಗಿದೆ. ಕಾರ್ನಾಡರ ನಾಗಮಂಡಲದಲ್ಲಿ ಅಜ್ಜಿಯ ಬಾಯಿಂದ ಹೊರಬಂದ ಕಥೆಯು ಹೆಣ್ಣಿನ ರೂಪವನ್ನು ತಾಳಿ ಕಥೆಯನ್ನು ಹೇಳುವ ಕ್ರಮ ನಾಟಕಕ್ಕೆ ಹೊಸ ಆಯಾಮವನ್ನು ನೀಡಿದೆ.

ನಾಟಕವು ಯಾರೂ ಯಾವ ಕಾಲದಲ್ಲೂ ಕಥೆಯನ್ನು ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಅದು ಒಂದಲ್ಲ ಒಂದು ಸಮಯದಲ್ಲಿ, ಒಂದಲ್ಲ ಒಂದು ರೂಪದಲ್ಲಿ ಹೊರಬರುವುದನ್ನು ಸಂಕೇತಿಸುತ್ತದೆ. ಪಾಳುಬಿದ್ದ ಗೋಪುರದಲ್ಲಿ ಸೇರಿದ್ದ ಜ್ಯೋತಿಗಳಲ್ಲಿ ಹೊಸಜ್ಯೋತಿಯು ತನ್ನ ಮನೆಯ ಕಥೆಯನ್ನು ಪ್ರಾರಂಭಿಸುವುದರೊಂದಿಗೆ ನಾಟಕದಲ್ಲಿ ಕಥೆಯ ಬೆಳವಣಿಗೆ ಸಾಗುತ್ತದೆ. ಮುದುಕಿಯಲ್ಲಿ ಅಂತರ್ಗತವಾಗಿದ್ದ ಕಥೆ ಅವಳಿಂದ ತಪ್ಪಿಸಿಕೊಂಡು ಹೊರಬಂದು ತನ್ನ ಅಸ್ತಿತ್ವವನ್ನು ಪಡೆದುಕೊಂಡದ್ದನ್ನು ಹೊಸಜ್ಯೋತಿ ಹೇಳುತ್ತದೆ.

ನಾಟಕವು ಹೀಗೆ ಒಂದು ಕಥೆಯನ್ನು ಬಚ್ಚಿಟ್ಟರೆ ಇನ್ನೊಂದಾಗುತ್ತದೆ ಎಂಬುದನ್ನೂ, ಬಹಳ ಕಾಲದವರೆಗೂ ಕಥೆಯು ಮನುಷ್ಯನ ಮನಸ್ಸಿನಲ್ಲಿಯೇ ಉಳಿಯದಿರುವುದನ್ನು ತಿಳಿಸುತ್ತವೆ. ಕಥೆ ಹೇಳುವ ಕಲೆಯು ಬಹಳ ಪ್ರಾಚೀನವಾದುದು. ಈ ಪ್ರಾಚೀನ ಕಥೆ ಹೇಳುವ ಕಲೆಯನ್ನು ಹೆಚ್ಚು ಮಹಿಳೆಯರೇ ರೂಢಿಸಿಕೊಂಡಿರಬಹುದು. ಆದುದರಿಂದ

ನಾಟಕದಲ್ಲಿ ಕಥೆಯು ಹುಡುಗಿಯ ರೂಪವನ್ನು ಪಡೆಯುವುದು ಪರಂಪರಾಗತವಾಗಿ ಮಹಿಳೆಯರೇ ಕಥೆಯನ್ನು ಬೆಳೆಸಿಕೊಂಡು ಬಂದಿರಬಹುದೆಂಬುದನ್ನು ಸೂಚಿಸುತ್ತದೆ.

ಎರಡನೆಯದಾಗಿ ಮನುಷ್ಯನ ಬದುಕಿಗೆ ಕಥೆಯ ಅಗತ್ಯವನ್ನು ನಾಟಕ ಬಿಂಬಿಸುತ್ತದೆ. ಕಥೆಗೆ ಮನುಷ್ಯನನ್ನು ಬದುಕಿಸುವ ಶಕ್ತಿಯಿದೆ. ನಾಟಕ ಪ್ರಾರಂಭವಾಗುವುದೇ ರಾತ್ರಿ ಸಮಯದಲ್ಲಿ ಒಂದು ಹಾಳುಗುಡಿಯ ಕಂಬಕ್ಕೊರಗಿ ತನಗೆ ಅಂಟಿರುವ ಶಾಪದಿಂದ ಮುಕ್ತನಾಗಲು ಹವಣಿಸುತ್ತಿರುವ ಮನುಷ್ಯನ ಗೋಳಿನ ಮೂಲಕ. ಈತ ಮನುಷ್ಯ ಮಾತ್ರನಲ್ಲ ನಾಟಕಕಾರನೂ ಕೂಡ. ಈ ನಾಟಕಕಾರ ಶಾಪಗ್ರಸ್ತನಾಗಿದ್ದಾನೆ. ತನ್ನ ಶಾಪದ ಕಾರಣವನ್ನು ಸಂನ್ಯಾಸಿಯಿಂದ ಕೇಳಿ ತಿಳಿಯುತ್ತಾನೆ..." ನೀನು ನಾಟಕ ಬರದಿದ್ದೀ, ಆಡಿಸಿದ್ದೀ, ನಿನ್ನ ಈ ನಾಟಕ ಪ್ರಯೋಗಗಳಿಂದಾಗಿ ನಿನ್ನನ್ನು ನಂಬಿ ಬಂದ ಮಹಾಜನತೆ ಒರಟು ಒರಟಾದ ಕುರ್ಚಿ-ಬೆಂಚುಗಳ ಮೇಲೆ, ಇತ್ತ ಸರಿಯಾಗಿ ನಿದ್ದೆ ಮಾಡೋ ಹಾಗೂ ಇಲ್ಲ, ಅತ್ತ ಪೂರ್ಣ ಎಚ್ಚರ ಇರೋ ಹಾಗೂ ಇಲ್ಲ ಅನ್ನುವಂಥ ದುರ್ಧರ ನರಕವನ್ನು ಅನುಭವಿಸಿದೆ. ಹಾಗೆ ಹದಗೆಟ್ಟ ನಿದ್ದೆ ಶಾಪವಾಗಿ ಈಗ ನಿನ್ನ ಬೆನ್ನು ಹತ್ತಿದೆ. ಸಾವಾಗಿ ನಿನ್ನನ್ನು ಸಂಧಿಸುತ್ತಾ ಇದೆ" ಎಂದ.

ಹೀಗೆ ಶಾಪದ ಕಾರಣವನ್ನು ತಿಳಿಸಿದ ಸಂನ್ಯಾಸಿಯಿಂದಲೇ ಉಶ್ಯಾಪದ ಮಾರ್ಗವನ್ನು ತಿಳಿಯುತ್ತಾನೆ. ಪ್ರಾರಂಭದಲ್ಲಿ ಸುಲಭವೆನಿಸುವ ಈ ಮಾರ್ಗ ಅಷ್ಟು ಸುಲಭ ಸಾಧ್ಯವಾದುದಲ್ಲ ಎಂಬ ಅರಿವು ಕ್ರಮೇಣ ಅವನಿಗಾಗುತ್ತದೆ. ಈ ತಿಂಗಳಲ್ಲಿ ಒಂದು ರಾತ್ರಿಯಾದರೂ ಪೂರ್ಣ ಜಾಗರಣೆ ಮಾಡಬೇಕು. ಅಂದರೆ ಬದುಕುತೀ. ಇಲ್ಲ ಅಂತಂದರೆ, ತಿಂಗಳ ಕೊನೆಯ ರಾತ್ರಿ ಸಾಯುತಿ ಅಂತ. ಸುಲಭವೆನಿಸಿದರೂ ಮಾಡಲು ಕಠಿಣವಾದ ಈ ಉಶ್ಯಾಪದಿಂದಾಗಿ ಇನ್ನು ಸ್ವಲ್ಪ ಸಮಯದಲ್ಲೇ ಸಾವನ್ನು ನಿರೀಕ್ಷಿಸುತ್ತ ದುಃಖಿಸುತ್ತಿರುವ ಮನುಷ್ಯನ ಬದುಕಿಗೆ ಆಶಾಕಿರಣವಾಗಿ ಬರುತ್ತದೆ ಕಥೆ. ಹೀಗೆ ಜಾನಪದ ಕಥೆ ಮತ್ತು ಹಾಡುಗಳ ಮೂಲಕ ಜ್ಞಾನ ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಹೋಗುವುದರ ಮೂಲಕ ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಹಂಚುವ ಮತ್ತು ಹರಡುವ ಕಾರ್ಯಗಳೂ ಜರುಗುತ್ತವೆ ಎಂಬುದನ್ನು ಸೂಚಿಸಲು ಕಾರ್ನಾಡರು ತಮ್ಮ ನಾಟಕದಲ್ಲಿ ಈ ತಂತ್ರವನ್ನು ಅಳವಡಿಸಿಕೊಂಡಂತೆ ತೋರುತ್ತದೆ.

ಕಥೆಯ ಜೊತೆಗೆ ಹಾಡೂ ಮುದುಕಿಯ ಬಾಯಿಂದ ಪಾರಾಗಿ ಬಂದಿದೆ. ಕಥೆ ಹುಡುಗಿಯಾದರೆ, ಹಾಡು ಅವಳ ಸೀರೆ. ಕಥೆಯಂತೆ ಹಾಡು ಅವಶ್ಯವಾಗಿರುವುದನ್ನು ಕಾಣಬಹುದು. ಹೀಗಾಗಿ ನಾಟಕದ ಮುಖ್ಯಕಥೆ ಹಾಡಿನಿಂದಲೇ ಪ್ರಾರಂಭಗೊಳ್ಳುತ್ತದೆ. "ಮಾಯದೋ ಮನದ ಭಾರ ತೆಗೆಧಾಂಗ ಎಲ್ಲ ದ್ವಾರ ಏನ್ಯ ಏನಿದು ಎಂಥಾ ಬೆರಗ್ಯ". ಎಂದು ಪ್ರಾರಂಭಗೊಳ್ಳುವ ಹಾಡು ನಾಗಪ್ಪ ಮತ್ತು ರಾಣಿ ಕೂಡಿದ ತರುವಾಯ ಪೂರ್ಣವಾಗಿ ಕೇಳಿಬರುತ್ತದೆ. ಹಾಗಾಗಿ ರಾಣಿಯು ನಾಗಪ್ಪನನ್ನು ಕೂಡಿದ್ದರಿಂದ ಅವಳ ಜೀವನದಲ್ಲಿ ಅಪೂರ್ಣತೆಯನ್ನು ಪೂರ್ಣತೆ ತುಂಬುವುದರಿಂದ ಹಾಡು ಲೈಂಗಿಕ ತೃಪ್ತಿಯ ಸಂಕೇತದಂತೆ ಕಂಡು ಬರುತ್ತದೆ. ಭಾರತೀಯ ನಾಟ್ಯ ಪರಂಪರೆಯಲ್ಲಿ ಭರತನ ಕಾಲದಿಂದಲೂ ಸಂಗೀತ ನಾಟ್ಯದ ಅಂಗಗಳಲ್ಲೊಂದು ಎಂಬುದನ್ನು ಗಮನಿಸಬಹುದು. ಹಾಗಾಗಿ ಕಥೆಯಷ್ಟೇ ಹಾಡು ಮುಖ್ಯವಾಗುತ್ತದೆ.

**ಕನಸು:**

ಅಪ್ಪಣ್ಣ ರಾಣಿಯನ್ನು ಮನೆಯಲ್ಲಿ ಒಬ್ಬಳನ್ನೇ ಬಂಧಿಸಿ ಬಾಗಿಲಿಗೆ ಬೀಗ ಜಡಿದು ಹೊರಟು ಹೋಗುವಾಗ ಪ್ರತಿದಿನ ತಾನು ಒಬ್ಬಂಟಿಗಳಾಗಿಯೇ ಉಳಿಯುವ ರಾಣಿ ತನ್ನನ್ನು ತಾನು ಸಮಾಧಾನ ಪಡಿಸಿಕೊಳ್ಳಲೆಂದು ತನಗೆ ಕಥೆ ಹೇಳಿಕೊಳ್ಳಲಾರಂಭಿಸುತ್ತಾಳೆ. ಇದರಿಂದಾಗಿ ಅವಳು ತನ್ನ ಭಯವನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾಳೆ. ಹಾಗೆಯೇ ಈ ಸಂದರ್ಭದಲ್ಲಿ ರಾಣಿಗೆ ಬೀಳುವ ಕನಸುಗಳು ಅವಳ ಮಾನಸಿಕ ತುಮುಲಗಳನ್ನು ವ್ಯಕ್ತಪಡಿಸುತ್ತವೆ. ರಾಣಿ ತನ್ನ ಕನಸಿನಲ್ಲಿ ಕಂಡ ಗರುಡವೊಂದು ಆಕೆಯನ್ನು ಹೊತ್ತುಕೊಂಡು ಹೋಗಿ ಅವಳ ತಂದೆ ತಾಯಿ ಇದ್ದಲ್ಲಿಗೆ ಬಿಟ್ಟು ಬರುತ್ತದೆ. ರಾಣಿಯನ್ನು ಗರುಡ ಹೊತ್ತೊಯ್ಯುವಾಗ ಕಂಡು ಬರುವ ಏಳು ಸಮುದ್ರದಾಚೆಗಿನ ಸುಂದರ ಪ್ರದೇಶ, ಏಳನೇ ಸಮುದ್ರದ ಮಧ್ಯದಲ್ಲಿರುವ ಸುಂದರ ಉದ್ಯಾನವನ, ಅದರ ಸುತ್ತಮುತ್ತಲಿನ ಸುಂದರ ಪ್ರದೇಶಗಳು, ಮಾಂತ್ರಿಕ ಸುಂದರ ಉದ್ಯಾನವನವು ಪರಿಪೂರ್ಣ ಪ್ರಪಂಚದ ಚಿಹ್ನೆಯಾಗಿ ಕಂಡುಬರುತ್ತದೆಯಾದರೂ ಇದು ಕೇವಲ ನಮ್ಮ ಕಲ್ಪನೆಯಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ. ರಾಣಿ ಕನಸಿನಲ್ಲಿ ತನ್ನ ತಂದೆ ತಾಯಿಯರನ್ನು ಗಟ್ಟಿಯಾಗಿ ಹಿಡುಕೊಂಡು ಅಳುತ್ತಾಳೆ. ನೊಂದ ಅವಳನ್ನು ಸಂತೈಸಿದ ಪೋಷಕರು ಅವಳನ್ನು ತಾವು ಇನ್ನೆಂದೂ ಬಿಟ್ಟು

ಹೋಗುವುದಿಲ್ಲವೆಂದು ಸಮಾಧಾನ ಪಡಿಸುತ್ತಾರೆ.

ಸುಂದರ ಕನಸುಗಳೊಂದಿಗೆ ವಿವಾಹ ಜೀವನಕ್ಕೆ ಕಾಲಿಟ್ಟ ರಾಣಿಯ ಸುಖ ಸಂಸಾರದ ಕನಸು ಕನಸಾಗಿಯೇ ಉಳಿಯುವುದು ಒಂದು ದುರಂತ. ರಾಣಿ ನಾಲ್ಕು ಗೋಡೆಗಳ ನಡುವೆ ಬಂಧಿಸಲ್ಪಡುತ್ತಾಳೆ. ತಂದೆ ತಾಯಿಯ ವಾತ್ಸಲ್ಯದಲ್ಲಿ ಬೆಳೆದ ರಾಣಿಗೆ ಗಂಡನ ಪ್ರೀತಿ ಮರೀಚಿಕೆಯಾಗಿಯೇ ಉಳಿಯುತ್ತದೆ. ರಾಣೀ ಒಬ್ಬಂಟಿಯಾಗುತ್ತಾಳೆ. ಮನೆಯ ವಾತಾವರಣ ಭಯವನ್ನುಂಟು ಮಾಡುತ್ತದೆ. ರಾಣಿಯು ಕಾಣುವ ಕನಸುಗಳು ಆಕೆಯ ಸುಪ್ತಮನಸ್ಸಿನ ಕ್ರಿಯೆಯನ್ನು ಸೂಚಿಸುತ್ತದೆ. ತನ್ನ ಮನಸ್ಸಿನಲ್ಲಿ ಅದುಮಿಟ್ಟ ಆಸೆ, ಆಕಾಂಕ್ಷೆಗಳು, ಅಪೇಕ್ಷೆ, ಅಭಿವ್ಯಕ್ತಿ ಭಾವಗಳು ಕನಸಿನ ರೂಪವನ್ನು ಪಡೆದು ಕನಸಿನಲ್ಲಿ ತನಗೆ ಸಿಗಲಾರದ್ದನ್ನು ಪಡೆಯುವ, ಪೂರ್ಣಗೊಳಿಸಿಕೊಳ್ಳುವ ಹಂಬಲ ವ್ಯಕ್ತವಾಗುತ್ತವೆ. ರಾಣಿಯ ಪ್ರಜ್ಞಾವಸ್ಥೆಯಲ್ಲಿ ಮರೆಯಾಗಿರುವ ಕಲ್ಪನೆಗಳು ಆಕೆಯ ಕನಸಿನಲ್ಲಿ ಜಾಗೃತಗೊಳ್ಳುವುದು ಹೆಚ್ಚು ಸಾಂಕೇತಿಕವಾಗಿದೆ. ರಾಣಿ ತನ್ನ ಹೆತ್ತವರ ಬಗೆಗೆ ಮೊದಲ ಬಾರಿಗೆ ಕನಸು ಕಾಣುತ್ತಿರುವಾಗ ಗರುಡ ಅವಳನ್ನು ಕರೆದುಕೊಂಡು ಹೋಗುತ್ತದೆ. ಅಗಲವಾದ ರಕ್ಕೆಗಳನ್ನು ಹೊಂದಿರುವ, ಆಕಾಶದಲ್ಲಿ ಮುಕ್ತವಾಗಿ ತನ್ನ ರೆಕ್ಕೆಗಳನ್ನು ವಿಮಾನದಂತೆ ಹರಡಿ ಹಾರಾಡುವ ಗರುಡ ಶಕ್ತಿ ಹಾಗೂ ಸ್ವಾತಂತ್ರ್ಯದ ಸಂಕೇತವಾಗಿ ಕಂಡುಬರುತ್ತದೆ. ಇಲ್ಲಿ ಗರುಡ ಮತ್ತು ಅದರ ಹಾರಾಡುವಿಕೆಯು ಬಂಧನದಲ್ಲಿರುವ ರಾಣಿಗೆ ತನ್ನ ಬಿಡುಗಡೆಯ ಸಂಕೇತದಂತೆ ಕಾಣುತ್ತದೆ ಹೀಗೆ ರಾಣಿ ತನ್ನ ಕನಸಿನ ಮೂಲಕವೇ ತನ್ನನ್ನು ಸಾಂತ್ವನಗೊಳಿಸಿಕೊಳ್ಳುತ್ತ ಬದುಕುಳಿಯುವ ಪ್ರಯತ್ನವನ್ನು ಮಾಡುತ್ತಾಳೆ.

**ಗಿಡಮೂಲಿಕೆ/ಬೇರು:**

ನಾಗಮಂಡಲ ನಾಟಕದಲ್ಲಿ ಕಾರ್ನಾಡರು ಭಾರತೀಯ ಸಂಸ್ಕೃತಿಯಲ್ಲಿ ಪ್ರಚಲಿತವಾಗಿರುವ ಹಲವಾರು ಅಲೌಕಿಕ ನಂಬಿಕೆಗಳನ್ನು ಬಳಸಿಕೊಳ್ಳುತ್ತಾರೆ. ಅದರಲ್ಲಿ ತನ್ನ ಗಂಡ ಅಪ್ಪಣ್ಣನನ್ನು ಒಲಿಸಿಕೊಳ್ಳಲು ಕುರುಡವ್ವ ನೀಡುವ ಗಿಡಮೂಲಿಕೆಯೂ ಒಂದಾಗಿದೆ. ಈ ಗಿಡಮೂಲಿಕೆಯು ಮೂಲತಃ ಗಂಡು ಹೆಣ್ಣಿನ ನಡುವಿನ ಅಂತರವನ್ನು ದೂರಮಾಡುವ ಕಾಮೋತ್ತೇಜಕ ಆಯುಧವಾಗಿದೆ. ಇಂತಹ ಗಿಡಮೂಲಿಕೆಗಳು ಭಾರತದ ಹಳ್ಳಿಗಳಲ್ಲಿ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ಹೇರಳವಾಗಿ

ದೊರೆಯುತ್ತಿದ್ದುದರ ಬಗೆಗೆ ಪುರಾಣಗಳಲ್ಲಿ ಉಲ್ಲೇಖವಿದೆ. ಇಂತಹ ಗಿಡಮೂಲಿಕೆಗಳನ್ನು ಸಾಮಾನ್ಯವಾಗಿ ಮನುಷ್ಯನಲ್ಲಿ ಪ್ರೇಮವನ್ನು ಹುಟ್ಟುಹಾಕಲು ಮತ್ತು ತಾನು ದ್ವೇಷಿಸುವವರ ವಿರುದ್ಧ ಸೇಡನ್ನು ತೀರಿಸಿಕೊಳ್ಳಲು ಬಳಸುತ್ತಿದ್ದದು ಸಾಮಾನ್ಯವಾಗಿದೆ. ಈ ಗಿಡಮೂಲಿಕೆಗಳು ಕೆಲವೊಮ್ಮೆ ಮನುಷ್ಯನನ್ನು ಅಪಾಯದ ಸನ್ನಿವೇಶಗಳಿಂದ ರಕ್ಷಿಸುತ್ತಿದ್ದದರ ಬಗೆಗೆ ಪ್ರಾಚೀನರಲ್ಲಿ ಉಲ್ಲೇಖವಿದೆ. ಕಾರ್ನಾಡರು ರಾಣಿಯ ಮನಸ್ಸಿನ ಗೊಂದಲವನ್ನು ಪರಿಹರಿಸಲು ಇಂತಹದ್ದೊಂದು ಸಾಂಪ್ರದಾಯಿಕ ಗಿಡಮೂಲಿಕೆಯನ್ನು ನಾಟಕದಲ್ಲಿ ಪ್ರಸ್ತಾಪಿಸುತ್ತಾರೆ. ಮಾತ್ರವಲ್ಲದೆ ಇಂತಹ ಗಿಡಮೂಲಿಕೆ ಕುರುಡವ್ವನಿಂದ ರಾಣಿಗೆ ಕೊಡಿಸುವುದು ನಮ್ಮ ಪೂರ್ವಜರು ಇವುಗಳ ಬಗೆಗೆ ಹೊಂದಿದ್ದ ಜ್ಞಾನವನ್ನು ಸೂಚಿಸುವ ಪ್ರತೀಕದಂತೆ ತೋರುತ್ತದೆ. ರಾಧಿಕಾ ಪ್ರಿಯದರ್ಶಿನಿಯವರು ಹೇಳುವಂತೆ “Kurudavva is the mythological earth mother displaced in the plausible human direction. She is associated with the ploughs, roots, pebbles, ect. Grish Karnad makes the earth erupt out in the form of Kurudavva, roots, plough, anthill and serpent to rescue Rani and avenge Appanna”

## ಹಗಲು ಮತ್ತು ರಾತ್ರಿ:

ರಾಣಿಯ ಜೀವನದಲ್ಲಿ ಹಗಲು-ರಾತ್ರಿಗಳ ದ್ವಂದ್ವದ ಬದುಕಿನ ಚಿತ್ರಣವಿದೆ. ರಾಣಿ ಹಳ್ಳಿಯ ಮುಗ್ಧ ಹೆಣ್ಣು ಮಗಳು. ಈಕೆ ಅಪ್ಪಣ್ಣನಂತಹ ಒರಟು ಗಂಡನ ಸ್ವಭಾವವನ್ನು ಕಂಡು ಭಯಭೀತಳಾಗಿದ್ದಾಳೆ. ಮದುವೆಯಾದ ನಂತರ ಬಂಧನಕ್ಕೆ ಒಳಗಾದ ರಾಣಿಗೆ ಗಂಡ ಅಪ್ಪಣ್ಣನ ದರ್ಶನವಾಗುವುದು ಪ್ರತಿದಿನ ಬೆಳಗ್ಗೆ ಊಟಕ್ಕಾಗಿ ಬಂದಾಗಲೇ. ಕುರುಡವ್ವ ಕೊಟ್ಟ ಬೇರನ್ನು ತನ್ನ ಗಂಡನಿಗೆ ಉಣಬಡಿಸಲು ಭಯಪಡುವ ರಾಣಿ ಅದನ್ನು ಹುತ್ತಕ್ಕೆ ಸುರಿಯುತ್ತಾಳೆ. ಹುತ್ತದ ನಾಗಪ್ಪ ಅಪ್ಪಣ್ಣನ ವೇಷದಲ್ಲಿ ಪ್ರತಿರಾತ್ರಿ ರಾಣಿಯನ್ನು ಸಂಧಿಸುತ್ತಾನೆ. ರಾಣಿಗೆ ಈ ಹಗಲು-ರಾತ್ರಿಗಳಲ್ಲಿನ ಅಪ್ಪಣ್ಣನ ವರ್ತನೆಯಲ್ಲಿನ ಭಿನ್ನತೆ ಗೊಂದಲವುಂಟುಮಾಡುತ್ತದೆ. “ಹೀಗೆ ರಾತ್ರಿ ಬಂದಾಗ... ಚೆಂದಾಗಿ ಮಾತಾಡಿಸುತೀರಿ, ಹಗಲು ಮಾತ್ರ ನಾನು ಬಾಯಿ ತೆಗೆಯೋದೆ ತಡ... ಬುಸ್ ಬುಸ್ ಅಂತ ಹಾಯತೀರಿ” ಎಂದು ಪ್ರಶ್ನಿಸುತ್ತಾಳೆ. ಒಂದೇ ರೂಪದ ಭಿನ್ನ ಭಿನ್ನ ಸ್ವಭಾವವುಳ್ಳ,

ವ್ಯಕ್ತಿತ್ವವುಳ್ಳವರೊಂದಿಗೆ ಒಡನಾಟ ಹೊಂದಿದಂತಹ ಅನುಭವವಾಗುತ್ತದೆ ರಾಣಿಗೆ. ಈ ಅನುಭವ ಅವಳಲ್ಲಿ ಭಯವನ್ನುಂಟು ಮಾಡಿದೆ. ಆದರೆ ಇದರ ಆಳವನ್ನು ಹುಡುಕುವುದರಲ್ಲಿ ಆಕೆಗೆ ಆಸಕ್ತಿಯಿಲ್ಲ ಕಾರಣ ಆಕೆ ಬಯಸಿದ್ದು ರಾತ್ರಿ ತನ್ನೊಂದಿಗೆ ಮಧುರವಾಗಿ ಮಾತನಾಡುವ ನಾಗಪ್ಪನಂತಹ ಗಂಡ, ಜೊತೆಗೆ ನಾಗಪ್ಪ ಅಪ್ಪಣ್ಣನ ಬೆಳಗ್ಗಿನ ವರ್ತನೆಯನ್ನು ರಾತ್ರಿ ತನ್ನ ಪ್ರೀತಿಯಿಂದ ಮರೆಯುವಂತೆ ಮಾಡುವ ಹುನ್ನಾರದಿಂದ ರಾಣಿ ಉನ್ಮತ್ತಳಾಗುತ್ತಾಳೆ. ರಾಣಿಗೆ ಹಗಲು ರಾತ್ರಿಯ ಈ ದ್ವಂದ್ವದ ಅರಿವಾಗುವುದು ಅಪ್ಪಣ್ಣನೊಂದಿಗೆ ಸಂಸಾರವನ್ನು ಶುರು ಮಾಡಿದ ನಂತರ. “ಒಬ್ಬ ಗಂಡಸು ಇನ್ನೊಬ್ಬನ ಹಾಗೆ ಪ್ರೀತಿಸೋದಿಲ್ಲ. ಪ್ರತಿಯೊಬ್ಬನೂ ಪ್ರೀತಿ ಮಾಡುವ ರೀತಿ ಬೇರೆ. ಪಟ್ಟು ಬೇರೆ. ಪೇಚು ಬೇರೆ, “ಹಗಲು ಹೊತ್ತಿನ ಹಣೆಗಂಟು ಬೇರೆ, ರಾತ್ರಿಯ ನೇವರಿಕೆ ಬೇರೆ” ಎಂದು ಮೊದಲೇ ಗೋಳಾಡುತ್ತಿದ್ದಳು. ಈಗ ಒಮ್ಮಿಂದೊಮ್ಮೆಲೆ ರಾತ್ರಿಯ ರೀತಿನೂ ಬದಲಾಗಿ ಬಿಟ್ಟರೆ, ಸ್ಪರ್ಶನೇ ಬೇರೆಯಾಗಿ ಬಿಟ್ಟರೆ ಎಂಥ ಗಾಬರಿ! ಯಾರು - ಯಾರು - ಯಾರು - ಯಾರು - ಯಾರು! ಪ್ರತಿ ರಾತ್ರಿ ಈ ಪ್ರಶ್ನೆ ಹೆಡೆ ಎತ್ತಿರಲಿಕ್ಕಿಲ್ಲೇನು? ಮೈ ಕಕ್ಕಾವಿಕ್ಕಿಯಾಗಿರಲಿಕ್ಕಿಲ್ಲೇನು?” ಹೀಗೆ ರಾಣಿಯ ಜೀವನದಲ್ಲಿ ಹಗಲು-ರಾತ್ರಿಗಳು ಗೊಂದಲವನ್ನು ಸೃಷ್ಟಿಸುತ್ತದೆ.

**ಹಾವು/ನಾಗಪ್ಪ:**

ದಕ್ಷಿಣ ಭಾರತದ ಹಲವು ನೆಲೆಗಳಲ್ಲಿ ನಾಗನನ್ನು ದೈವವಾಗಿ ಪೂಜಿಸುವ ಪರಿಪಾಠ ತುಂಬಾ ಪ್ರಾಚೀನವಾದುದು. ಅದರಲ್ಲೂ ಪಶ್ಚಿಮ ಘಟ್ಟದಿಂದ ಕರಾವಳಿಯವರೆಗಿನ ದಟ್ಟಾರಣ್ಯ ಪ್ರದೇಶ ಈ ನಾಗಾರಾಧನೆಯ ಮೂಲಭೂಮಿ ಎಂದು ಹೇಳಲಾಗುತ್ತದೆ. ನಾನಾ ವಿಧವಾದ ಸರ್ಪ ಸಮೂಹಗಳಿಂದ ತುಂಬಿಹೋಗಿದ್ದ ಈ ಕಾಡುಗಳು ಅಲ್ಲಿನ ಮೂಲನಿವಾಸಿಗಳ ತಾಣವೂ ಆಗಿದ್ದ ಕಾರಣ ಈ ಸರ್ಪಗಳ ಬಗೆಗಿದ್ದ ಮೂಲಭಯ ಹಾಗೂ ವಿಸ್ಮಯ ನಾಗಾರಾಧನೆಗೆ ಕಾರಣವಾಗಿರಬೇಕು ಎಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಪಂಚದಾದ್ಯಂತ ನಾಗನನ್ನು ಪೂಜಿಸುವ ಪದ್ಧತಿಗಳಲ್ಲಿ ಒಂದು ಕಲ್ಲಿನಲ್ಲಿ ಕೆತ್ತಿದ ನಾಗನನ್ನು ಪೂಜಿಸುವುದು, ನಾಗನ ಆವಾಸಸ್ಥಾನವಾದ ಹುತ್ತವನ್ನು ಪೂಜಿಸುವುದು ಮತ್ತೊಂದು ಪದ್ಧತಿ. ಈ ಪದ್ಧತಿಗಳು ನಾಡಿನಾದ್ಯಂತ ಜನಪ್ರಿಯವಾಗಿವೆ. ಇದು ಅತ್ಯಂತ ಪ್ರಾಚೀನ ಪದ್ಧತಿ ಎಂಬ ನಂಬಿಕೆಯೂ ಉಂಟು. ಬೇರೆ ಬೇರ ಹೆಸರುಗಳಿಂದ ಆರಾಧಿಸಲ್ಪಡುತ್ತಿರುವ

ಇವತ್ತಿನ ಎಷ್ಟೋ ದೈವಗಳ ಮೂಲಸ್ಥಾನ ಹಿಂದೆ ಹುತ್ತಗಳಾಗಿದ್ದು ನಾಗಾರಾಧನೆಯ ಮೂಲ ಕೇಂದ್ರಗಳಾಗಿದ್ದವು ಎಂಬ ನಂಬಿಕೆಯೂ ಇದೆ. ಇಲ್ಲಿನ ಮೂಲನಿವಾಸಿಗಳೂ ಹಾಗೂ ಅನೇಕ ಬುಡಕಟ್ಟುಗಳು ಪೂಜಿಸುತ್ತಿದ್ದ ಹುತ್ತಗಳ ಮೇಲೆ ಪಶುಪಾಲಕರಾಗಿ ಬಂದ ವಲಸೆಗಾರರು ಸ್ವಯಂಭೂಲಿಂಗಗಳನ್ನು ಸ್ಥಾಪಿಸಿದರು ಎಂಬುದು ಕೆಲವು ವಿದ್ವಾಂಸರ ವಾದ. ಅಂದರೆ ಫಲದಾಯಿತ್ವಕ್ಕೆ ಸಂಕೇತವಾದ ಯೋನಿ(ಹುತ್ತ) ಹಾಗೂ ಸೃಷ್ಟಿಗೆ ಕಾರಣವಾದ ಶಿಶ್ನ(ಲಿಂಗ)ಗಳನ್ನು ಬೆಸೆಯುವ ಮೂಲಕ ಪುರುಷ ಮತ್ತು ಪ್ರಕೃತಿಯಲ್ಲಿ ಸಮನ್ವಯತೆಯನ್ನು ತಂದುದು ಇದರ ಹಿಂದಿನ ಮಹತ್ವ ಎಂಬುದೂ ಕೆಲವರ ಅಭಿಪ್ರಾಯ.

ಕುರುಡವ್ವನ ಬೇರಿನ ಸಹಾಯದಿಂದ ರಾಣಿಯ ಜೀವನವನ್ನು ಪ್ರವೇಶಿಸುವ ನಾಗಪ್ಪ ದಿವ್ಯದ ನಂತರ ರಾಣಿಯಿಂದ ದೂರವೇ ಉಳಿಯಬೇಕಾಗುತ್ತದೆ. ತನ್ನ ಮತ್ತು ರಾಣಿಯ ನಡುವೆ ಬರುವ ನಾಯಿ ಮತ್ತು ಮುಂಗೂಸಿಯನ್ನು ಕೊಲ್ಲುತ್ತಾನಾದರೂ ದಿವ್ಯದ ನಂತರ ತನ್ನ ಹೆಂಡತಿಯನ್ನು ಪ್ರೀತಿಯಿಂದ ಕಾಣಲಾರಂಭಿಸಿದ ಅಪ್ಪಣ್ಣನನ್ನು ಕೊಲ್ಲುವ ಪ್ರಯತ್ನವನ್ನ ಮಾಡಲಾರ. ಕೀರ್ತಿನಾಥ ಕುರ್ತುಕೋಟಿಯವರು ಹೇಳುವಂತೆ “ನಾಗಮಂಡಲದ ಸರ್ಪ ಒಮ್ಮೆ ಕಾಮವಾಗಿ ಮತ್ತೊಮ್ಮೆ ಹಿಂಸೆಯಾಗಿ, ಆದರೂ ಹಾವಾಗಿಯೇ ಹರಿಯುತ್ತ ನಾಟಕವನ್ನು ಸಾರ್ಥಕವಾಗಿಸುತ್ತದೆ”. ಕೊನೆಯಲ್ಲಿಯ ದಿವ್ಯದ ಸನ್ನಿವೇಶದಲ್ಲಿ ಸಾಮಾಜಿಕ ದೃಷ್ಟಿಯಿಂದ ಹಿಂಸೆಯಾಗಿರುವುದು ವೈಯಕ್ತಿಕವಾಗಿ ಕಾಮವಾಗಿ ಅವಳನ್ನು ರಕ್ಷಿಸುತ್ತದೆ. ನಾಟಕದ ತುಂಬ ಕಾಮಸಂಬಂಧಗಳ ವಿಶ್ಲೇಷಣೆ ನಡೆಯುತ್ತದೆ. ಹಯವದನದಂತೆ ಇಲ್ಲಿ ಕೂಡ ನಾಟಕದ ತಂತ್ರ ವಿಶೇಚಗಳನ್ನು ಗಿರೀಶರು ಬಹಳ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕಣ್ಣಿದ್ದರೂ ಗಂಡನ ಕಣ್ಣಿಗೆ ಕಾಣದಿದ್ದ ರಾಣಿಯ ವ್ಯಥೆ ಕುರುಡವ್ವಳಿಗೆ ಕಾಣುತ್ತದೆ. ರಾತ್ರಿಯ ಕತ್ತಲಲ್ಲಿ ಸ್ಪರ್ಶವೇ ಕಣ್ಣಾಗುತ್ತದೆ. ಹಗಲು ರಾತ್ರಿಗಳ ಕಣ್ಣು ಮುಚ್ಚಾಣಿಕೆಯಲ್ಲಿ ನಾಟಕದ ದೃಶ್ಯಗಳು ಮೂಡಿ ಮರೆಯಾಗುತ್ತವೆ. ರಾತ್ರಿಯ ಹೊತ್ತು ಹಾಳು ಗುಡಿಯಲ್ಲಿ ಸೇರಿದ ಜ್ಯೋತಿಗಳು ಮನೆಮನೆಯ ಕಥೆಗಳನ್ನು ಹೇಳತೊಡಗುತ್ತವೆ. ಈ ಬೆಳಕು ಕತ್ತಲೆಗಳ ರಂಗಭೂಮಿಯ ಮೇಲೆ ನಾಟಕ ಅರ್ಥಪೂರ್ಣವಾಗಿ ತೆರೆದುಕೊಳ್ಳುತ್ತದೆ.

## ಆಕರ ಗ್ರಂಥಗಳು:

1. ಗಿರೀಶ್ ಕಾರ್ನಾಡ್. (1988). ನಾಗಮಂಡಲ. ಮನೋಹರ ಗ್ರಂಥ ಮಾಲಾ. ಧಾರವಾಡ.
2. ಚಂದ್ರಶೇಖರ ಕಂಬಾರ. (2012). ಸಿರಿಸಂಪಿಗೆ. ಅಂಕಿತ ಪುಸ್ತಕ. ಬೆಂಗಳೂರು.

## ಪರಾಮರ್ಶನ ಗ್ರಂಥಗಳು:

1. ಕೀರ್ತಿನಾಥ ಕುರ್ತಕೋಟಿ. (2010). ಸಿರಿಸಂಪಿಗೆ ನಾಟಕದ ಮುನ್ನುಡಿ. ಅಂಕಿತ ಪುಸ್ತಕ. ಬೆಂಗಳೂರು.
2. ಕೀರ್ತಿನಾಥ ಕುರ್ತಕೋಟಿ. (1998). ನೂರು ಮರ ನೂರು ಸ್ವರ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.